(ಸಾಕ್ಷಿಯನ್ನು ಈ ದಿನ ತಾ 20/09/2019 ರಂದು ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು)

<u>ಮುಖ್ಯ ವಿಚಾರಣೆ ಅರ್ಜಿದಾರನ ಪರ ಶ್ರೀ ಜಿ.ಎನ್.ಬಿ. ವಕೀಲರಿಂದ</u>

ನನ್ನ ಮುಖ್ಯ ವಿಚಾರಣೆಯಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ.

ನನ್ನ ಪರವಾಗಿ ಈ ಪ್ರಕರಣದಲ್ಲಿ ಕೆಲವೊಂದು ದಾಖಲೆಗಳನ್ನು ಹಾಜರು ಮಾಡಿದ್ದು, ಗೆಜೆಟ್ ಪ್ರಕಟಣೆ ನಿಪಿ-1 ರಲ್ಲಿದೆ. ನೋಟೀಸು ನಿಪಿ-2 ರಲ್ಲಿದೆ. ಪಹಣಿ ಪತ್ರಿಕೆಗಳು ನಿಪಿ-3 ರಿಂದ ನಿಪಿ-8 ರಲ್ಲಿವೆ. ಪೋಟೋಗಳು ನಿಪಿ-9 ರಿಂದ ನಿಪಿ-11 ರಲ್ಲಿವೆ. ಅದರ ಸಿ.ಡಿ. ನಿಪಿ-12 ರಲ್ಲಿದೆ. ವಂಶವೃಕ್ಷ ನಿಪಿ-13 ರಲ್ಲಿದೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ನಿಪಿ14 ರಲ್ಲಿದೆ. ಗ್ರಾಮ ಲೆಕ್ಕಾಧಿಕಾರಿಗಳು ಕೊಟ್ಟಿರುವ ಬೆಳೆ ದೃಢೀಕರಣ ಪತ್ರಗಳು ನಿಪಿ15 ಮತ್ತು ನಿಪಿ-16 ರಲ್ಲಿವೆ. ಸಿರಾ ತಹಶೀಲ್ದಾರ್ ಇವರು ನೀಡಿರುವ ದೃಢೀಕರಣ ಪತ್ರ ನಿಪಿ17 ರಲ್ಲಿದೆ. ಬೆಸ್ಕಾಂನವರು ಕೊಟ್ಟಿರುವ ದೃಢೀಕರಣ ಪತ್ರ ನಿಪಿ18 ರಲ್ಲಿದೆ. ಪಾಸ್ ಬುಕ್ ನಿಪಿ-19 ರಲ್ಲಿದೆ.

ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಕೇಳಿರುವಂತೆ ಪರಿಹಾರವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಎದುರುದಾರರು ಮತ್ತು ಅವರ ವಕೀಲರು ಗೈರು ಹಾಜರು ಆಗಿದ್ದುದರಿಂದ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.)

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಲಾಗಿದೆ ಸರಿ ಇದೆ ಎಂದು ಒಪ್ಪಿರುತ್ತಾರೆ)

1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು.